



# ನಾಟಕ ಆಡಾಡ್ತ ಪಾಠ!



ಟಿ. ಶರಣಯ್ಯ

ಪರಿಣಾಮಕಾರಿ ಕಲಿಕೆಗೆ ಕಲೆಯ ಕೊಡುಗೆ ದೊಡ್ಡದು. ಶಿಕ್ಷಣ ಮತ್ತು ಮನರಂಜನೆ ನೀಡುವ ಸಾಮರ್ಥ್ಯವಿರುವ ಮಾಧ್ಯಮಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿರುವಂಥದ್ದು ರಂಗಭೂಮಿ. ಮಕ್ಕಳಲ್ಲಿ ಕಲ್ಪನಾ ಶಕ್ತಿ, ಭಾಷಾ ಸಾಮರ್ಥ್ಯ ಹೆಚ್ಚಿಸಿ, ವೇದಿಕೆ ಭಯವನ್ನೂ ರಂಗಭೂಮಿ ಹೋಗಲಾಡಿಸುತ್ತದೆ. ಜೀ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಡ್ರಾಮಾ ಜೂನಿಯರ್ಸ್' ಕಾರ್ಯಕ್ರಮ ಈ ನಿಟ್ಟಿನಲ್ಲಿ ಒಂದು ಅರ್ಥಪೂರ್ಣ ಪ್ರಯೋಗಕ್ಕೆ ತನ್ನನ್ನು ಒಡ್ಡಿಕೊಂಡಿದೆ.

ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಕ್ರಮದಲ್ಲಿನ ಕೆಲವು ಗದ್ಯಗಳನ್ನು ನಾಟಕ ರೂಪಕ್ಕೆ ಅಳವಡಿಸಲಾಗಿದೆ. ತಮ್ಮ ಪಾಠದಲ್ಲಿನ ಪಾತ್ರಗಳಿಗೆ ಮಕ್ಕಳೇ ಜೀವ ತುಂಬಿ ಅಭಿನಯಿಸುತ್ತಿದ್ದಾರೆ. ವಾಹಿನಿಯ ಒಂದು ಕಾರ್ಯಕ್ರಮದಿಂದ ಸಾಧ್ಯವಾಗುವುದು, ನಮ್ಮ ಶಾಲೆಗಳಲ್ಲಿ ಏಕೆ ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆ ಮೂಡುತ್ತದೆ.

## 'ಬುದ್ಧ' ಪ್ರಯೋಗಕ್ಕೆ ಪ್ರೇರಣೆ

'ಕಾವ್ಯ ಎಂಬ ಹುಡುಗಿ 'ಸರ್, ಬುದ್ಧನ ಬಗ್ಗೆ ಪರೀಕ್ಷೆಯಲ್ಲಿ ಪ್ರಶ್ನೆ ಕೇಳಿದ್ದರು. ಡ್ರಾಮಾ ಜ್ಯೂನಿಯರ್ಸ್‌ನಲ್ಲಿ ಆ ಬಗ್ಗೆ ನೋಡಿದ್ದೆ. ಹೀಗಾಗಿ, ಪರೀಕ್ಷೆಯಲ್ಲಿ ಚೆನ್ನಾಗಿ ಬರೆದೆ' ಎಂದಿದ್ದಳು. ಡ್ರಾಮಾ ಜೂನಿಯರ್ಸ್‌ನ ಮೂರನೇ ಸೀಸನ್‌ನಲ್ಲಿ ಹೊಸದು ತೋರಿಸಬೇಕೆಂದು ಯೋಚಿಸಿದ್ದಾಗ ಕಾವ್ಯಾಳ ಮಾತು ನೆನಪಿಗೆ ಬಂತು. ಪಠ್ಯಕ್ರಮದಲ್ಲಿ ಗದ್ಯ–ಪದ್ಯಗಳನ್ನೇ ನಾಟಕಕ್ಕೆ ಒಗ್ಗಿಸಬಾರದೇಕೆ ಎನಿಸಿ ಈ ಪ್ರಯೋಗಕ್ಕೆ ಕೈ ಹಾಕಿದೆ' ಎನ್ನುತ್ತಾರೆ ಕಾರ್ಯಕ್ರಮದ ನಿರ್ದೇಶಕ ಶರಣಯ್ಯ ಟಿ.

ಸಿಲಬಸ್‌ನಲ್ಲಿನ ಪಾಠಗಳನ್ನು ಪ್ರದರ್ಶಿಸುವುದರ ಮೂಲಕ ಮಕ್ಕಳನ್ನು ನೇರವಾಗಿ ಈ ಕಾರ್ಯಕ್ರಮ ತಲುಪುತ್ತಿದೆ. ಸಿನಿಮಾ, ಧಾರಾವಾಹಿಗಳಲ್ಲಿ ಮಕ್ಕಳಿಗೆ ಮಾರಕವಾದ ವಿಚಾರಗಳೇ ಹೆಚ್ಚು. ಅಲ್ಲದೆ, ಕಲೆ, ಸಾಹಿತ್ಯ, ಸಂಸ್ಕೃತಿಯಂತಹ ವಿಚಾರಗಳ ಕುರಿತು ಹೇಳಲು ಅಲ್ಲಿ 'ಸಮಯ ಮತ್ತು ಅಭಿರುಚಿ'ಯ ಅಭಾವ ಎದ್ದು ಕಾಣುತ್ತದೆ. ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ 'ಡ್ರಾಮಾ ಜೂನಿಯರ್ಸ್' ಕೆಲಸ ಮಾಡುತ್ತಿದೆ. ಶಬರಿ, ಹೂವಾದ ಹುಡುಗಿ, ಕೋಳೂರ ಕೊಡಗೂಸು, ವೃಕ್ಷ ಸಾಕ್ಷಿ, ಭೂಮಿಗಿಳಿದ ಬೃಹಸ್ಪತಿಯಂತಹ ಗದ್ಯಗಳು ಈ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಒದಗಿಸುವುದರ ಜೊತೆಗೆ, ಈ ಗದ್ಯಗಳನ್ನು ಪಠ್ಯಕ್ರಮದಲ್ಲಿ ಹೊಂದಿರುವ ವಿದ್ಯಾರ್ಥಿಗಳಿಗೆ ಒಂದಿಷ್ಟು ಹೆಚ್ಚು ಅಂಕಗಳನ್ನೂ ಗಳಿಸಿಕೊಟ್ಟಿವೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

## ಗುರುಕುಲ ಮಾದರಿ ಕಲಿಕೆ

'ನಾಡಿನ ಎಲ್ಲ ಭಾಗದ ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ. ಕನ್ನಡದ ಎಲ್ಲ ಶೈಲಿ ಮತ್ತು ಸಂಸ್ಕೃತಿಯ ಪರಿಚಯ ಇಲ್ಲಿ ಮಕ್ಕಳಿಗಾಗುತ್ತಿದೆ. ಮಂಗಳೂರಿನ ಹುಡುಗಿ ಧಾರವಾಡ ಶೈಲಿಯ ಕನ್ನಡ ಮಾತನಾಡಿದರೆ, ಕೊಪ್ಪಳದ ಹುಡುಗ, ಮಂಡ್ಯದ ಕನ್ನಡವನ್ನು ಅಪ್ಪಟ ಗ್ರಾಮೀಣ ಶೈಲಿಯಲ್ಲಿ ಹೇಳುತ್ತಾನೆ. ಅಭಿನಯದ ಜೊತೆಗೆ ಭಾಷೆಯ ಸೊಗಡು ಅರಿತು ಮಾತನಾಡುವಾಗ ಧ್ವನಿಯ ಏರಿಳಿತ ಹೇಗಿರಬೇಕು